# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಮಂಗಳವಾರ, ೧೩, ಅಕ್ಟೋಬರ್, ೨೦೨೬ (ಆಶ್ವಯುಜ , ೨೧, ಶಕವರ್ಷ, ೧೯೪೮)<br>BENGALURU, TUESDAY, 13, OCTOBER, 2026 (AASHWAYUJA , 21, SHAKAVARSHA, 1948) | ನಂ. ೧೧೩೭<br>No.1137 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ವಿವಿಧ **ಸಮತಳ ಮೀಸಲಾತಿಗಳನ್ನು** ಅನುಷ್ಠಾನಗೊಳಿಸಲು ರೋಸ್ಟರನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**

1. ದಿನಾಂಕ: 08.03.2023 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023,
2. ದಿನಾಂಕ: 13.05.2026 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026,
3. ದಿನಾಂಕ:03.10.2026 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 295 ಎಸ್ಆರ್ಆರ್ 2023.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 08.03.2023 ರ ಸರ್ಕಾರದ ಆದೇಶದಲ್ಲಿ, ಪ್ರತಿಯೊಂದು ನೇರ ಮೀಸಲಾತಿ ಪ್ರವರ್ಗದಡಿ (under each category of vertical reservation) ಮಾಜಿ ಸೈನಿಕ, ಅಂಗವಿಕಲ, ಮಹಿಳೆ, ಯೋಜನೆಗಳಿಂದ ನಿರ್ವಸಿತರಾದವರು, ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಮತ್ತು ತೃತೀಯ ಲಿಂಗಿಗಳಿಗೆ ಕಲ್ಪಿಸಲಾದ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು ಹಿಂದೆ ನಿಗದಿಪಡಿಸಲಾಗಿದ್ದ 20 ಬಿಂದುಗಳ ರೋಸ್ಟರನ್ನು ಮಾರ್ಪಡಿಸಿ, ದಿನಾಂಕ 08.03.2023 ರ ಸದರಿ ಆದೇಶದ ಅನುಬಂಧದಲ್ಲಿ 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 13.05.2026 ರ ಸರ್ಕಾರದ ಆದೇಶದಲ್ಲಿ, ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ ಅನುಸರಿಸಬೇಕಾದ 400 ಬಿಂದುಗಳ ರೋಸ್ಟರನ್ನು ಅದರ ಅನುಬಂಧ-1 ರಲ್ಲಿ ನಿಗದಿಪಡಿಸಲಾಗಿರುತ್ತದೆ. ಅಲ್ಲದೆ, ಪರಿಶಿಷ್ಟ ಜಾತಿಯ ವಿವಿಧ ಪ್ರವರ್ಗಗಳಿಗೆ ಅಂದರೆ, ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳಿಗೆ ಕ್ರಮವಾಗಿ ಹಂಚಿಕೆಯಾದ 5.25, 5.25 ಮತ್ತು 4.5 ಪ್ರಮಾಣವನ್ನು ಅನುಸರಿಸಿ, ತಯಾರಿಸಿರುವ 60 ಬಿಂದುಗಳ ರೋಸ್ಟರ್ ಅನ್ನು ಅದರ ಅನುಬಂಧ-2 ರಲ್ಲಿ ನಿಗದಿಪಡಿಸಲಾಗಿರುತ್ತದೆ ಹಾಗೂ ಈ ಮೀಸಲಾತಿ ರೋಸ್ಟರನ್ನು ನಿರ್ವಹಿಸುವ ಕುರಿತು ಮಾರ್ಗಸೂಚಿಗಳನ್ನು ಸಹ ನೀಡಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ:03.10.2026 ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ನ್ನು ಜಾರಿಗೊಳಿಸಲಾಗಿದ್ದು, ಸದರಿ ನಿಯಮಗಳ ನಿಯಮ 9 ರಡಿ ಉಪ-ನಿಯಮ (1E) ನ್ನು ಪ್ರತಿಸ್ಥಾಪಿಸಿ, ಎಲ್ಲಾ ನೇರ ನೇಮಕಾತಿಗಳಲ್ಲಿ, ನೇಮಕಾತಿಯ ವಿಧಾನದ ಕುರಿತು ಸರ್ಕಾರವು ಹೊರಡಿಸಬಹುದಾದ ಯಾವುದೇ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು, ಆ ವಿಧಾನಕ್ಕಾಗಿ ಮೀಸಲಿಡಲಾದ ಶೇಕಡಾ ಎರಡರಷ್ಟು ಖಾಲಿ ಹುದ್ದೆಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಗಳಲ್ಲಿ, ಕ್ರೀಡಾ ಸಾಧಕರಾಗಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆಸ್ಪದ ಕಲ್ಪಿಸಲಾಗಿರುತ್ತದೆ.

4. ಈ ಹಿನ್ನೆಲೆಯಲ್ಲಿ, ಮೇಲೆ (1) ರಲ್ಲಿ ಓದಲಾದ ಆದೇಶದ ಅನುಬಂಧದಲ್ಲಿರುವ ನಿಗದಿಪಡಿಸಿರುವ 100 ಬಿಂದುಗಳ ಕ್ರೋಢೀಕೃತ ರೋಸ್ಟರ್‌ನಲ್ಲಿ ಕ್ರೀಡಾ ಸಾಧಕರಿಗೆ ಶೇಕಡಾ 2ರಷ್ಟು ಅಂದರೆ, 100 ರಲ್ಲಿ 2 ಬಿಂದುಗಳನ್ನು ಗುರುತಿಸಿ ಸದರಿ ರೋಸ್ಟರನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 05 ಸೆಹಿಮ 2026,</u>**
**<u>ಬೆಂಗಳೂರು, ದಿನಾಂಕ: 13.10.2026</u>**

5. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಮೇಲೆ (1) ರಲ್ಲಿ ಓದಲಾದ, ದಿನಾಂಕ 08.03.2023 ರ ಸರ್ಕಾರಿ ಆದೇಶದ ಅನುಬಂಧದಲ್ಲಿ ನಿಗದಿಪಡಿಸಲಾದ 100 ಬಿಂದುಗಳ ಸಮತಳ ರೋಸ್ಟರ್‌ನ್ನು ಪರಿಷ್ಕರಿಸಿ ರೋಷ್ಟರ್ ಬಿಂದುಗಳು: 21 ಮತ್ತು 61ನ್ನು ಕ್ರೀಡಾ ಸಾಧಕರಿಗಾಗಿ ಗುರುತಿಸಿ ಈ ಆದೇಶದ **ಅನುಬಂಧದಲ್ಲಿರುವಂತೆ** ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಿದೆ.

6. ನೇರ ನೇಮಕಾತಿಯ ಪ್ರತಿ ಸಂದರ್ಭದಲ್ಲಿ, ನೇರ ನೇಮಕಾತಿಗಾಗಿ ಲಭ್ಯವಾಗುವ ರಿಕ್ತಸ್ಥಾನಗಳಲ್ಲಿ ನೇರ ಮೀಸಲಾತಿ (vertical reservation)ಗೆ ಸಂಬಂಧಿಸಿದಂತೆ, ಮೇಲೆ (2) ರಲ್ಲಿ ಓದಲಾದ ದಿನಾಂಕ: 13.05.2026ರ ಸರ್ಕಾರಿ ಆದೇಶದನ್ವಯ ರಿಕ್ತಸ್ಥಾನಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ ಪ್ರವರ್ಗ-ಎ, ಪರಿಶಿಷ್ಟ ಜಾತಿ ಪ್ರವರ್ಗ-ಬಿ , ಪರಿಶಿಷ್ಟ ಜಾತಿ ಪ್ರವರ್ಗ-ಸಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಾದ ಪ್ರವರ್ಗ-I , ಪ್ರವರ್ಗ-IIಎ, ಪ್ರವರ್ಗ-IIಬಿ, ಪ್ರವರ್ಗ-IIIಎ ಹಾಗೂ ಪ್ರವರ್ಗ-IIIಬಿ ಈ ವರ್ಗಗಳಿಗಾಗಿ ವಿಂಗಡಿಸಿಕೊಂಡು, ಈ ಪ್ರತಿಯೊಂದು ನೇರ ನೇಮಕಾತಿ ಪ್ರವರ್ಗ (vertical reservation) ಕ್ಕೆ ಲಭ್ಯವಾಗುವ ರಿಕ್ತಸ್ಥಾನಗಳಿಗೆ, ಈ ಆದೇಶದ **ಅನುಬಂಧದಲ್ಲಿ** ಗೊತ್ತುಪಡಿಸಲಾದ 100 ಬಿಂದುಗಳ ಪರಿಷ್ಕೃತ ರೋಸ್ಟರಿನನ್ವಯ **ಸಮತಳ ಮೀಸಲಾತಿಯನ್ನು ಅನ್ವಯಿಸತಕ್ಕದ್ದು.**

7. ನೇರ ನೇಮಕಾತಿಯ ಸಂದರ್ಭದಲ್ಲಿ, ಅಧಿಸೂಚಿಸಿದ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತಸ್ಥಾನಗಳನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು. ಮುಂದಿನ ನೇಮಕಾತಿಯಲ್ಲಿಯೂ, ಅಧಿಸೂಚಿತ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ, ಯಾವುದೇ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯರಾಗದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

8. ನೇರ ನೇಮಕಾತಿಯ ಸಂದರ್ಭದಲ್ಲಿ, ಉಳಿದ ಸಮತಳ ಮೀಸಲಾತಿಗಳಾದ ಮಾಜಿ ಸೈನಿಕರಿಗೆ, ಯೋಜನೆಗಳಿಂದ ನಿರ್ವಸಿತರಾದವರಿಗೆ, ಮಹಿಳೆಯರಿಗೆ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ, ಗ್ರಾಮೀಣ ಅಭ್ಯರ್ಥಿಗಳಿಗೆ ಹಾಗೂ ಕ್ರೀಡಾ ಸಾಧಕರಿಗೆ ಗುರುತಿಸಿರುವ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ, ಮಾಜಿ ಸೈನಿಕರಿಗೆ / ಯೋಜನೆಗಳಿಂದ ನಿರ್ವಸಿತರಾದವರಿಗೆ/ತೃತೀಯ ಲಿಂಗಿಗಳಿಗೆ/ಕ್ರೀಡಾ ಸಾಧಕರಿಗೆ ಸಂಬಂಧಿಸಿದ ಸಮತಳ ಮೀಸಲಾತಿ ವರ್ಗಕ್ಕೆ ಮೀಸಲಿರಿಸಿದ ರಿಕ್ತಸ್ಥಾನಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆ ರಿಕ್ತಸ್ಥಾನಗಳನ್ನು ಅದೇ ನೇರ ಮೀಸಲಾತಿ (vertical reservation) ಗೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆ ರಿಕ್ತಸ್ಥಾನಗಳನ್ನು ಅದೇ ನೇರ ಮೀಸಲಾತಿ (vertical reservation) ಗೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಗುರುತಿಸಿರುವ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಂದಲೇ ಭರ್ತಿ ಮಾಡತಕ್ಕದ್ದು.

9. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಈ ಆದೇಶವನ್ನು ಹೊರಡಿಸಿದ ನಂತರ ಯಾವುದೇ ನೇರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವ ಸಂದರ್ಭದಲ್ಲಿ ಹಿಂದಿನ ನೇರ ನೇಮಕಾತಿಯಲ್ಲಿ ಸಮತಳ ಮೀಸಲಾತಿ ರೋಸ್ಟರನ್ನು ಯಾವ ಬಿಂದುವಿನವರೆಗೆ ಜಾರಿಗೊಳಿಸಲಾಗಿತ್ತೋ, ಆ ನಂತರದ ಬಿಂದುವಿನಿಂದ ಪ್ರಾರಂಭಿಸತಕ್ಕದ್ದು.

10. ಪ್ರಸ್ತುತ ಜಾರಿಯಲ್ಲಿರುವ ಸಮತಳ ಮೀಸಲಾತಿ, ಆಸ್ಪದವನ್ನು ಕಲ್ಪಿಸಿರುವ ಅಧಿನಿಯಮ / ನಿಯಮ, ಮೀಸಲಾತಿಯ ಪ್ರಮಾಣವನ್ನು ಈ ಕೆಳಗೆ ವಿವರಿಸಲಾಗಿದೆ.

| ಕ್ರ. ಸಂ. | ಸಮತಳ ಮೀಸಲಾತಿಯ ವರ್ಗ | ಸಮತಳ ಮೀಸಲಾತಿಯ ಪ್ರಮಾಣ | ಸಮತಳ ಮೀಸಲಾತಿಯ ಆಸ್ಪದವನ್ನು ಕಲ್ಪಿಸಿರುವ ಅಧಿನಿಯಮ / ನಿಯಮ |
|---|---|---|---|
| 1 | ಮಾಜಿ ಸೈನಿಕರು | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 10 ರಷ್ಟು** | ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರ ಉಪ ನಿಯಮ (1) |
| 2 | ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳು (persons with disabilities) | ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 5 ರಷ್ಟು**.<br>ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 4 ರಷ್ಟು**. | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಎ). |

| | | | |
|---|---|---|---|
| 3 | ಯೋಜನೆಗಳಿಂದ ನಿರ್ವಸಿತರಾದವರು | ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 5 ರಷ್ಟು** | 1977ರ ಸದರಿ ನಿಯಮಗಳ ನಿಯಮ 9 ರ ಉಪ ನಿಯಮ (1ಎಎ) |
| 4 | ಮಹಿಳೆಯರು | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 33 ರಷ್ಟು.** | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಬಿ). |
| 5 | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು. | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 5 ರಷ್ಟು.** | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಸಿ). |
| 6 | ತೃತೀಯ ಲಿಂಗಿಗಳು | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇಮಕಾತಿಗಳಲ್ಲಿ **ಶೇಕಡಾ 1 ರಷ್ಟು.** | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಡಿ) |
| 7 | ಗ್ರಾಮೀಣ ಅಭ್ಯರ್ಥಿಗಳು. | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ **ಶೇಕಡಾ 25 ರಷ್ಟು.** | ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000. |
| 8 | ಕ್ರೀಡಾ ಸಾಧಕರು. | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ, ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಲ್ಲಿ **ಶೇಕಡಾ 2 ರಷ್ಟು.** | ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರ ಉಪ-ನಿಯಮ (1ಇ). |

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆಶಾಕುಮಾರಿ ಎ.ಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1).

# ಅನುಬಂಧ

## ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 05 ಸೆಹಿಮ 2026, ದಿನಾಂಕ:13.10.2026

| | | | | | | | | | |
|---|---|---|---|---|---|---|---|---|---|
| 01 | ಇತರೆ | 21 | ಕ್ರೀ.ಸಾ | 41 | ಇತರೆ | 61 | ಕ್ರೀ.ಸಾ | 81 | ಇತರೆ |
| 02 | ಮ.ಅ | 22 | ಮ.ಅ | 42 | ಮ.ಅ | 62 | ಮ.ಅ | 82 | ಮ.ಅ |
| 03 | ಗ್ರಾ.ಅ. | 23 | ಗ್ರಾ.ಅ. | 43 | ಗ್ರಾ.ಅ. | 63 | ಗ್ರಾ.ಅ. | 83 | ಗ್ರಾ.ಅ. |
| 04 | ಅಂ.ವಿ. | 24 | ಅಂ.ವಿ. | 44 | ಅಂ.ವಿ. | 64 | ಅಂ.ವಿ. | 84 | ಅಂ.ವಿ. |
| 05 | ಮ.ಅ | 25 | ಮ.ಅ | 45 | ಮ.ಅ | 65 | ಮ.ಅ | 85 | ಮ.ಅ |
| 06 | ಗ್ರಾ.ಅ. | 26 | ಗ್ರಾ.ಅ. | 46 | ಗ್ರಾ.ಅ. | 66 | ಗ್ರಾ.ಅ. | 86 | ಗ್ರಾ.ಅ. |
| 07 | ಇತರೆ | 27 | ಇತರೆ | 47 | ಇತರೆ | 67 | ಇತರೆ | 87 | ಇತರೆ |
| 08 | ಮ.ಅ. | 28 | ಮ.ಅ. | 48 | ಮ.ಅ. | 68 | ಮ.ಅ. | 88 | ಮ.ಅ. |
| 09 | ಗ್ರಾ.ಅ. | 29 | ಗ್ರಾ.ಅ. | 49 | ಗ್ರಾ.ಅ. | 69 | ಗ್ರಾ.ಅ. | 89 | ಗ್ರಾ.ಅ. |
| 10 | ಮಾ.ಸೈ. | 30 | ಮಾ.ಸೈ. | 50 | ಮಾ.ಸೈ. | 70 | ಮಾ.ಸೈ. | 90 | ಮಾ.ಸೈ. |
| 11 | ಮ.ಅ | 31 | ಇತರೆ | 51 | ಮ.ಅ | 71 | ಇತರೆ | 91 | ಮ.ಅ |
| 12 | ಮ.ಅ | 32 | ಮ.ಅ | 52 | ಮ.ಅ | 72 | ಮ.ಅ | 92 | ಮ.ಅ |
| 13 | ಗ್ರಾ.ಅ. | 33 | ಗ್ರಾ.ಅ. | 53 | ಗ್ರಾ.ಅ. | 73 | ಗ್ರಾ.ಅ. | 93 | ಗ್ರಾ.ಅ. |
| 14 | ಕ.ಮಾ.ಅ. | 34 | ಕ.ಮಾ.ಅ. | 54 | ಕ.ಮಾ.ಅ. | 74 | ಕ.ಮಾ.ಅ. | 94 | ಕ.ಮಾ.ಅ. |
| 15 | ಮ.ಅ | 35 | ಮ.ಅ | 55 | ಮ.ಅ | 75 | ಮ.ಅ | 95 | ಮ.ಅ |
| 16 | ಗ್ರಾ.ಅ. | 36 | ಗ್ರಾ.ಅ. | 56 | ಗ್ರಾ.ಅ. | 76 | ಗ್ರಾ.ಅ. | 96 | ಗ್ರಾ.ಅ. |
| 17 | ಯೋ.ಅ. | 37 | ಯೋ.ಅ. | 57 | ಯೋ.ಅ. | 77 | ಯೋ.ಅ. | 97 | ಯೋ.ಅ. |
| 18 | ಮ.ಅ | 38 | ಮ.ಅ | 58 | ಮ.ಅ | 78 | ಮ.ಅ | 98 | ಮ.ಅ |
| 19 | ತೃ.ಲಿಂ. | 39 | ಇತರೆ | 59 | ಇತರೆ | 79 | ಇತರೆ | 99 | ಇತರೆ |
| 20 | ಮಾ.ಸೈ. | 40 | ಮಾ.ಸೈ. | 60 | ಮಾ.ಸೈ. | 80 | ಮಾ.ಸೈ. | 100 | ಮಾ.ಸೈ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಟಿಪ್ಪಣಿ-1

| | |
|---|---|
| ಮ.ಅ | ಮಹಿಳಾ ಅಭ್ಯರ್ಥಿ |
| ಮಾ.ಸೈ. | ಮಾಜಿ ಸೈನಿಕರು |
| ಅಂ.ವಿ. | ಅಂಗವಿಕಲ ಅಭ್ಯರ್ಥಿ |
| ಯೋ.ಅ. | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ |
| ಗ್ರಾ.ಅ. | ಗ್ರಾಮೀಣ ಅಭ್ಯರ್ಥಿ |
| ಕ.ಮಾ.ಅ. | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ |
| ತೃ.ಲಿಂ. | ತೃತೀಯ ಲಿಂಗಿಗಳು |
| ಕ್ರೀ.ಸಾ | ಕ್ರೀಡಾ ಸಾಧಕರು |

## ಟಿಪ್ಪಣಿ-2

1. **ಗ್ರೂಪ್-ಎ ಮತ್ತು ಗ್ರೂಪ್-ಬಿ** ವೃಂದಗಳ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ, ಮೇಲಿನ ಸಮತಳ ಮೀಸಲಾತಿ ರೋಸ್ಟರಿನಲ್ಲಿ ಅಂಗವಿಕಲರಿಗೆ ಗುರುತಿಸಿರುವ 4, 24, 44, 64 ಮತ್ತು 84 ನೇ ಬಿಂದುಗಳಲ್ಲಿ 84ನೇ ಬಿಂದುವನ್ನು ಪರಿಗಣಿಸದೇ ಅದೇ ಪ್ರವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

2. **ಗ್ರೂಪ್-ಎ ಮತ್ತು ಗ್ರೂಪ್-ಬಿ** ವೃಂದಗಳ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಸಮತಳ ಮೀಸಲಾತಿ ರೋಸ್ಟರಿನಲ್ಲಿ ಯೋಜನೆಗಳಿಂದ ನಿರ್ವಸಿತರಾದ ಅಭ್ಯರ್ಥಿಗಳಿಗೆ ಗುರುತಿಸಿರುವ ಬಿಂದುಗಳನ್ನು ಪರಿಗಣಿಸದೇ ಅದೇ ಪ್ರವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು